ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	98 (97)
2) ಸದಸ್ಯರ ಹೆಸರು	:	ಶ್ರೀ ಜಿ. ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3) ಉತ್ತರಿಸುವ ದಿನಾಂಕ	:	21-09-2020
4) ಉತ್ತರಿಸುವವರು	:	ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಚಿತ್ರದುರ್ಗ ಜೋಗಿಮಟ್ಟಿಯಲ್ಲಿರುವ ಆಡು ಮಲ್ಲೇಶ್ವರ ಮೃಗಾಲಯ ಅಭಿವೃದ್ಧಿಗೆ ಅರಣ್ಯ ಇಲಾಖೆ ಕೈಗೊಂಡಿರುವ ಕ್ರಮಗಳೇನು; (ಮಾಹಿತಿ ನೀಡುವುದು)</td><td>ಚಿತ್ರದುರ್ಗ ವಿಭಾಗದ ಆಡುಮಲ್ಲೇಶ್ವರ ಕಿರು ಮೃಗಾಲಯವು ದಿನಾಂಕ:18.09.2017 ರಿಂದ ಕರ್ನಾಟಕ ಮೃಗಾಲಯ ಪ್ರಾಧಿಕಾರ, ಮೈಸೂರು ರವರ ಆಡಳಿತ ವ್ಯಾಪ್ತಿಗೆ ಒಳಪಟ್ಟಿದ್ದು, ಸದರಿ ಕಿರು ಮೃಗಾಲಯದ ಮಾಸ್ಟರ್ ಲೇಔಟ್ ನಕ್ಷೆಯು ಕೇಂದ್ರಿಯ ಮೃಗಾಲಯ ಪ್ರಾಧಿಕಾರ, ನವದೆಹಲಿಯವರಿಂದ ಅನುಮೋದನೆಯಾಗಿರುತ್ತದೆ. ಅದರನ್ವಯ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ:
• ಆಡುಮಲ್ಲೇಶ್ವರ ಕಿರು ಮೃಗಾಲಯದಲ್ಲಿ ನೂತನವಾಗಿ ಚಿರತೆ / ಕರಡಿ / ಜೀಬ್ರಾ / ಜಿಂಕೆ / ಕೃಷ್ಣಮೃಗಗಳ ಆವರಣವನ್ನು ಮತ್ತು ಮೃಗಾಲಯದ ಸುತ್ತ ಚೈನ್ ಲಿಂಕ್, ಮೆಷ್ ಫೆನ್ಸಿಂಗ್ ಅಳವಡಿಸುವ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.
• 2020-21ನೇ ಸಾಲಿನಲ್ಲಿ ಮೃಗಾಲಯದಲ್ಲಿ ಹೊಸದಾಗಿ ಆಸ್ಪತ್ರೆ, ಸ್ಟೋರ್ ರೂಮ್ ಮತ್ತು ಅಡುಗೆ ಕೊಠಡಿ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುತ್ತವೆ.</td></tr>
<tr><td>ಆ)</td><td>ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿರುವ ಅರಣ್ಯ ಇಲಾಖೆ ಪ್ರವಾಸಿ ಮಂದಿರಗಳ ಸಂಖ್ಯೆ ಎಷ್ಟು; ಇದರಲ್ಲಿ ಪ್ರವಾಸಿಗರಿಗೆ ನೀಡಲಾಗುತ್ತಿರುವ ಪ್ರವಾಸಿ ಮಂದಿರಗಳ ಸಂಖ್ಯೆ ಎಷ್ಟು; (ಮಾಹಿತಿ ನೀಡುವುದು)</td><td>ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿರುವ ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಅರಣ್ಯ ಅತಿಥಿ ಗೃಹಗಳ ವಿವರ ಈ ಕೆಳಕಂಡಂತಿದೆ.
<table>
<tr><th>ವಿಭಾಗ</th><th>ಸ್ಥಳ</th><th>ಅರಣ್ಯ ಅತಿಥಿ ಗೃಹಗಳ ಸಂಖ್ಯೆ</th><th>ಪ್ರವಾಸಿಗರಿಗೆ ನೀಡಲಾಗುತ್ತಿರುವ ಪ್ರವಾಸಿ ಮಂದಿರಗಳ ಸಂಖ್ಯೆ</th></tr>
<tr><td rowspan="2">ದಾವಣಗೆರೆ</td><td>ಕೊಂಡಜ್ಜಿ, ದಾವಣಗೆರೆ</td><td>01</td><td>-</td></tr>
<tr><td>ಚಿಗಟೇರಿ, ಹರಪ್ಪನಹಳ್ಳಿ</td><td>01</td><td>-</td></tr>
<tr><td rowspan="3">ಚಿತ್ರದುರ್ಗ</td><td>ಜೋಗಿಮಟ್ಟಿ</td><td>01</td><td>-</td></tr>
<tr><td>ಮೇಟಿಕುರ್ಕೆ, ಹಿರಿಯೂರು</td><td>01</td><td>-</td></tr>
<tr><td>ಬಿ.ಜಿ.ಕೆರೆ, ಮೊಳಕಾಲ್ಮೂರು</td><td>01</td><td>-</td></tr>
</table></td></tr>
</table>

ಇ)	ಪ್ರವಾಸಿ ಮಂದಿರಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಸರ್ಕಾರ ಕಳೆದ 2 ವರ್ಷಗಳಲ್ಲಿ ಕೈಗೊಂಡಿರುವ ಕಾಮಗಾರಿಗಳು ಹಾಗೂ ಅದಕ್ಕೆ ತಗುಲಿದ ವೆಚ್ಚ ಎಷ್ಟು? (ಮಾಹಿತಿಒದಗಿಸುವುದು)	ಮೇಲ್ಕಂಡ ಅರಣ್ಯ ಅತಿಥಿ ಗೃಹಗಳಿಗ ಮೂಲಭೂತ ಸೌಕರ್ಯ ಒದಗಿಸಲು ಕಳೆದ 2 ವರ್ಷಗಳಲ್ಲಿ ಕೈಗೊಂಡಿರುವ ಕಾಮಗಾರಿಗಳು ಹಾಗೂ ಅದಕ್ಕೆ ತಗುಲಿದ ವೆಚ್ಚ ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ.)

ವಿಭಾಗ	ವಸತಿ ಗೃಹಗಳ ವಿವರ	ಕೈಗೊಂಡ ಕಾಮಗಾರಿ ವಿವರ	ಬಿಡುಗಡೆ ಮಾಡಿದಅನುದಾನ		ವೆಚ್ಚ ಭರಿಸಿದ ಅನುದಾನ	
			2018–19	2019–20	2018–19	2019–20
ದಾವಣಗೆರೆ	ಕೊಂಡಜ್ಜಿ, ದಾವಣಗೆರೆ ಜಿಗಳೇರಿ, ಹರಪ್ಪನಹಳ್ಳಿ	ನವೀಕರಣ, ನೀರಿನ [illegible] ಹಾಗೂ ಪೇಂಟಿಂಗ್ ಕಾಮಗಾರಿ	–	25.00	–	4.62
ಚಿತ್ರದುರ್ಗ	ಜೋಗಿಮಟ್ಟಿ ಮೇಟಿಕುರ್ಕೆ, ಹಿರಿಯೂರು ಬಿ.ಜಿ.ಕೆರೆ, ಮೊಳಕಾಲ್ಮೂರು		25.00	25.00	11.83	2.09

ಸಂಖ್ಯೆ: ಅಪಜೀ 46 ಎಫ್‌ಟಿಎಸ್ 2020

(ಆನಂದ್ ಸಿಂಗ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು